# O.S.36/2017

PW : 2

ದಿನಾಂಕ 09-08-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎನ್ ಡಿ ವಕೀಲರಿಂದ, 4 ರಿಂದ 6 ನೇ ಪ್ರತಿವಾದಿ ಪರಃ

ನಾನು ಅನಕ್ಷರಸ್ಥ. ನನ್ನ ಜನ್ಮ ದಿನಾಂಕ ಹೇಳಲು ಆಗುವುದಿಲ್ಲ. ನನಗೆ ಸೇರಿದ 6 ಎಕರೆ ಜಮೀನು ತುಮ್ಮಿನಕಟ್ಟಿ ಗ್ರಾಮದಲ್ಲಿದೆ, ಅದು ಬುಳ್ಳಾಪುರ ಗಡಿಗೆ ಲಗತ್ತಾಗಿದೆ. ದಾವಾಸ್ತಿಯ ಸರ್ವೆ ನಂ. 2/1, ಸರ್ವೆ ನಂ.2 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ಗೊತ್ತಿಲ್ಲ. ದಾವಾಸ್ತಿ ರಾಣೇಬೆನ್ನೂರು ರಸ್ತೆಯಲ್ಲಿ ಬರುತ್ತದೆ. ನನ್ನ ಮನೆ ತುಮ್ಮಿನಕಟ್ಟಿ ಗ್ರಾಮದ ಹನುಮಂತನ ದೇವಸ್ಥಾನದ ಬಳಿ ಇದೆ. ನಮ್ಮ ಮನೆಗೂ ದಾವಾಸ್ತಿಗೂ ಸುಮಾರು 2 ಕಿ ಮೀ ಅಂತರ ಇದೆ. ರಾಣೇಬೆನ್ನೂರಿನ ರಸ್ತೆ ಕಡೆಗೆ ನನಗೆ ಸೇರಿದ ಯಾವುದೇ ಜಮೀನು ಇಲ್ಲ. ನಾನು ನನ್ನ ಜಮೀನಿನಲ್ಲಿ ಮಾತ್ರ ವ್ಯವಸಾಯ ಮಾಡುತ್ತೇನೆ. ಗೋಣಿಬಸಪ್ಪ ದಾವಾಸ್ತಿಯ ಮೂಲ ಮಾಲೀಕರು. ದಾವಾಸ್ತಿಯ ದಕ್ಷಿಣಕ್ಕೆ ಭೀಮಪ್ಪನ ಜಮೀನು, ಉತ್ತರಕ್ಕೆ ಸುರೇಶಪ್ಪ ಪಾಟೀಲ, ಪೂರ್ವಕ್ಕೆ ಉಪ್ಪಾರ ರಾಮಣ್ಣನ ಜಮೀನು, ಪಶ್ಚಿಮಕ್ಕೆ ಬಂಡಿ ದಾರಿ ಇದೆ. ವಾದಿಗಳು ಎಷ್ಟು ಎಕರೆ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ವಾದಿಗಳು ದಾವಾಸ್ತಿಯ ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ. 4 ರಿಂದ 6 ನೇ ಪ್ರತಿವಾದಿಗಳಿಗೆ ಸರ್ವೆ ನಂ.2 ರಲ್ಲಿ ಜಮೀನು ಭೂನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಎಂದು ಗೊತ್ತಿಲ್ಲ. ವಾದಿಗಳು ದಾವಾಸ್ತಿಯ ಸ್ವಾಧೀನದಾರರಲ್ಲ, ಪ್ರತಿವಾದಿಗಳೇ ದಾವಾಸ್ತಿಯ ಸ್ವಾಧೀನದಾರರು ಎಂದರೆ ಗೊತ್ತಿಲ್ಲ. ನಾನು ವಾದಿಗು ಆಪ್ತರು. ವಾದಿಗಳ ಕೋರಿಕೆಯಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಯಾವುದೇ ಉತ್ತರ ನೀಡಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.